# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 253

ಸದಸ್ಯರ ಹೆಸರು : ಶ್ರೀ ಎನ್.ರವಿಕುಮಾರ್
(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 04-03-2020

ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂ.55/1(ಪಿ), 55/2(ಪಿ), 56, 57, 58, 59(ಪಿ) ಮತ್ತು 60(ಪಿ)ರಲ್ಲಿ ಅತಿಕ್ರಮವಾಗಿ ನಿರ್ಮಿಸಿರುವ ಅಕ್ರಮ ಕಟ್ಟಡವನ್ನು ತೆರವುಗೊಳಿಸಲು ಮಾಲಿನ್ಯ ನಿಯಂತ್ರಣ ಮಂಡಳಿಯು ದಿನಾಂಕ: 28-12-2018 ರಂದು ಆದೇಶ ನೀಡಿದ್ದು, ಈ ಕುರಿತು ಯಾವ ಕ್ರಮ ಕೈಗೊಳ್ಳಲಾಗಿದೆ; | ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂ. 55/1(ಪಿ), 55/2(ಪಿ), 56, 57, 58, 59(ಪಿ) ಮತ್ತು 60(ಪಿ)ರಲ್ಲಿ ನಿರ್ಮಿಸುತ್ತಿರುವ ಶಾಪಿಂಗ್ ಮಾಲ್ ಕಟ್ಟಡ ಕಾಮಗಾರಿಯನ್ನು ಸ್ಥಗಿತಗೊಳಿಸುವ ಬಗ್ಗೆ, 1. The Occupier, Mantri Serenity. 2. The Managing Director, BESCOM. 3. The Commissioner, Bangalore Development Authority, 4. The Deputy Chief Electrical Inspector. 5. The Deputy Commissioner, Bangalore Urban ರವರುಗಳಿಗೆ ದಿನಾಂಕ:28-12-2018ರ ಪತ್ರದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಹೊರಡಿಸಿರುವ ಆದೇಶದಂತೆ ನಿರ್ದೇಶನ ನೀಡಲಾಗಿರುತ್ತದೆ.<br>ಬೆಂಗಳೂರು ನಗರ ಜಿಲ್ಲಾಧಿಕಾರಿಯವರ ಕಛೇರಿಯಿಂದ ಮಂತ್ರಿ ಕ್ಯಾಸಲ್ಸ್ ಪ್ರೈ.ಲಿ ರವರಿಗೆ ಕರ್ನಾಟಕ ಭೂಕಂದಾಯ ಕಾಯ್ದೆ ಅಧಿನಿಯಮ 1964ರ ಪ್ರಕರಣ 104ರಡಿ ನೋಟೀಸ್ ನೀಡಲಾಗಿರುತ್ತದೆ.<br>ಪ್ರಸ್ತಾಪಿತ ಜಮೀನಿನ ವಿಚಾರವಾಗಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:3854/2018ರ ಪ್ರಕರಣ ದಾಖಲಾಗಿರುತ್ತದೆ. ಅಲ್ಲದೇ, ಮಾನ್ಯ ಲೋಕಾಯುಕ್ತದಲ್ಲಿ ಪ್ರಕರಣ ಸಂಖ್ಯೆ:3370/2015ರಂತೆ ಪ್ರಕರಣ ದಾಖಲಾಗಿತ್ತದೆ. ಪ್ರಸ್ತುತ ಸದರಿ ಪ್ರಕರಣಗಳು ವಿಚಾರಣಾ ಹಂತದಲ್ಲಿರುತ್ತವೆ. |
| ಆ) | ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂ.55/1(ಪಿ), 55/2(ಪಿ), 56, 57, 58, 59(ಪಿ) ಮತ್ತು 60(ಪಿ)ರಲ್ಲಿ ಅತಿಕ್ರಮವಾಗಿ ನಿರ್ಮಿಸಿರುವ ಅಕ್ರಮ ಕಟ್ಟಡ ನಿರ್ಮಾಣದ ಕೆಲಸ ಕಾರ್ಯಗಳನ್ನು ನಿಲ್ಲಿಸಿ, ಸಂಪೂರ್ಣ ಪ್ರಾಜೆಕ್ಟ್ ಸೀಜ್ ಮಾಡಲು ಲಿಖಿತವಾಗಿ ಮಾಲಿನ್ಯ ನಿಯಂತ್ರಣ ಮಂಡಳಿ ಆದೇಶ ನೀಡಿದ ಬಳಿಕವೂ ಸಂಪೂರ್ಣ ಪ್ರಾಜೆಕ್ಟ್ ಸೀಜ್ ಮಾಡದಿರಲು ಕಾರಣವೇನು; | ಪ್ರಸ್ತಾಪಿತ ಜಮೀನಿನ ವಿಚಾರದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮತ್ತು ಮಾನ್ಯ ಲೋಕಾಯುಕ್ತದಲ್ಲಿ ದಾಖಲಾಗಿರುವ ಪ್ರಕರಣಗಳು ವಿಚಾರಣಾ ಹಂತದಲ್ಲಿರುವುದರಿಂದ ಪ್ರಾಜೆಕ್ಟ್ ಸೀಜ್ ಮಾಡಲು ಸಾಧ್ಯವಾಗಿರುವುದಿಲ್ಲ. |

| | | |
|---|---|---|
| ಇ) | ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂ.55/1(ಪಿ), 55/2(ಪಿ), 56, 57, 58, 59 (ಪಿ) ಮತ್ತು 60 (ಪಿ)ರಲ್ಲಿ ಅತಿಕ್ರಮವಾಗಿ ನಿರ್ಮಿಸಿರುವ ಅಕ್ರಮ ಕಟ್ಟಡವನ್ನು ನೆಲಸಮಗೊಳಿಸುವ ಮೂಲಕ ತೆರವುಗೊಳಿಸಬೇಕೆಂದು ಮಾಲಿನ್ಯ ನಿಯಂತ್ರಣ ಮಂಡಳಿ ಆದೇಶ ನೀಡಿದ ಬಳಿಕವೂ ನೆಲಸಮಗೊಳಿಸದಿರಲು ಕಾರಣವೇನು; ನೆಲಸಮಗೊಳಿಸಲಾಗುವುದು ಯಾವಾಗ? | ಪ್ರಸ್ತಾಪಿತ ಜಮೀನಿನ ವಿಚಾರವಾಗಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮತ್ತು ಮಾನ್ಯ ಲೋಕಾಯುಕ್ತದಲ್ಲಿ ದಾಖಲಾಗಿರುವ ಪ್ರಕರಣಗಳು ವಿಚಾರಣಾ ಹಂತದಲ್ಲಿರುವುದರಿಂದ ಯಾವುದೇ ಕ್ರಮ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ. ಈ ಬಗ್ಗೆ ಮಾನ್ಯ ನ್ಯಾಯಾಲಯಕ್ಕೆ ವರದಿ ಸಲ್ಲಿಸುವ ಸಲುವಾಗಿ ಸದರಿ ಜಮೀನಿನ ಒತ್ತುವರಿಯ ಬಗ್ಗೆ ಅಳತೆ ಮಾಡಿ ನಕ್ಷೆ ತಯಾರಿಸಿ ಸಲ್ಲಿಸಲು ಭೂದಾಖಲೆಗಳ ಸಹಾಯಕ ನಿರ್ದೇಶಕರಿಗೆ ಜಿಲ್ಲಾಡಳಿತವು ಪತ್ರ ಬರೆದಿರುತ್ತದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರಿಂದ ವರದಿ ಸ್ವೀಕೃತವಾದ ನಂತರ ಮಾನ್ಯ ನ್ಯಾಯಾಲಯಕ್ಕೆ ವರದಿ ಸಲ್ಲಿಸಲಾಗುವುದು. ಮಾನ್ಯ ಉಚ್ಚ ನ್ಯಾಯಾಲಯ ಹಾಗೂ ಮಾನ್ಯ ಲೋಕಾಯುಕ್ತವು ಸೂಕ್ತ ಆದೇಶ ಹೊರಡಿಸಿದ ನಂತರ ಪರಿಶೀಲಿಸಿ ನಿಯಮಾನುಸಾರ ಕ್ರಮವಹಿಸಲಾಗುವುದು. |

ಸಂಖ್ಯೆ: ಆರ್‌ಡಿ 06 ಎಲ್‌ಜಿಕ್ಯೂ 2020

(ಆರ್. ಅಶೋಕ)
ಕಂದಾಯ ಸಚಿವರು.